



ಪಾಲ್ಗೊಳ್ಳಲು ನಾನು ಒಪ್ಪಿಕೊಂಡೆ. 'ಇದೊಂದು ಸಲ ಬರುತೀನಿ, ಸಲಿಲಾ... ನನಗಿದರಲ್ಲೆಲ್ಲ ನಂಬುಗೆಯಿಲ್ಲಾಂತ ಮತ್ತೆ ಹೇಳಬೇಕಿಲ್ಲ ಅಲ್ಲವಾ? ಮನುಷ್ಯತ್ವವನ್ನು ಮರೆಸದ ಈ ಓದು–ಬೋಧೆ ಇದ್ದರೆಷ್ಟು ಹೋದರೆಷ್ಟು, ಹೇಳು...' ಎಂದು ಮನಸ್ಸು ಸಿಂಡರಿಸಿ ಹೇಳಿದೆ.

'ದಿಸ್ ಈಸ್ ವೈ ಐ ರೆವಿಯರ್ ಯು, ಪರಿಧಿ ಸರ್...' ಸಲಿಲೆಯೀಗ ಕೊಂಚ ತಿಳಿಗೊಂಡವಳಂತೆ ತೋರಿದಳು. 'ಅವನೂ ಅಷ್ಟೇ ನಿಮ್ಮನ ಅಪಾರವಾಗಿ ನೆಚ್ಚುಕೊಂಡಿದಾನೆ. ಆದರೆ, ಏನು ಪ್ರಯೋಜನ?' ಎಂದು ದನಿತಗ್ಗಿಸಿ ಹೇಳಿದಳು.

'ಯಾರವನು, ಸಲಿಲಾ?'

ಸಲಿಲೆಯ ಉತ್ತರವಾದರೂ ನನ್ನ ಮೇಲೆ ಅಣ್ವಸ್ತ್ರವನ್ನೇ ಎಸೆದು ಮಡಗಿತ್ತು.

***

ಸಲಿಲೆಯನ್ನು 'ಓಗರ' ಕೆಫೆಯಿಂದ ಬೀಳ್ಕೊಂಡ ಬಳಿಕ ಕ್ಲ್ಯಾಸು ಹೊಕ್ಕೆನಾದರೂ ಪಾಠಕ್ಕೆ ತೊಡಗುವುದು ದುಸ್ತರವೇ ಆಯಿತು. ಮಧ್ಯಾಹ್ನದ ಮೇಲೆ ಮನೆಯ ದಾರಿ ಹಿಡಿದಾಗಲೂ ತಲೆಯೊಳಗಿನ ಗಿರಣಿ ಸುತ್ತುತ್ತಲೇ ಇತ್ತು. 'ಪುಂಡಾಡೋ ಗುಂಡನಾಗಿದ್ದರೆ ನಿನ್ನ ಕರುಮವೇ ಇಷ್ಟೂಂತ ಒದ್ದು ಒಳಗೆ ಹಾಕಬಹುದಾಗಿತ್ತು. ಆದರೆ, ಇವನು ಹಾಗಲ್ಲವಲ್ಲ–ಪರಿಧಿ ಸರ್...' ಎಂದು ಎಳೆದೆಳೆದು ಹೇಳಿದ ಸಲಿಲೆಯ ಮಾತು ಮತ್ತೆ ಮತ್ತೆ ಎಳೆದು ಮರುಕಳಿಸಿತು. ಮಾತುಕತೆಯ ಕೊನೆಯಲ್ಲಿ ಅವಳು ಹೇಳಿದ ಹೆಸರು ಮಾತ್ರ–ನನ್ನನ್ನು ಬುಡಸಮೇತ ಅಲುಗಿಸಿಬಿಟ್ಟಿತ್ತು. ದೇವರೇ... ನೆಚ್ಚಿದ್ದು ನುಚ್ಚಾದ ಮೇಲೆ ನಂಬುಗೆಯೇ ಮೋಸವಷ್ಟೆ? ಅಥವಾ, ಮೆಚ್ಚುಗೆಯನ್ನು ಯಾರಿಂದಲಾದರೂ ಅಳೆದು ತೂಗಿ ಹೇಳಲಾದೀತೇ?

ಕಡೆಗೆ ಮನಸೇ ನುಚ್ಚಾಗಿ ಹೋಯಿತು.

ಹೌದು, ತಲೆಯೊಳಗಿನ ಗಿರಣಿಯೇ ನನ್ನ ಕಾರನ್ನೂ ಓಡಿಸಿತೆನ್ನುವ ಹಾಗೆ, ಆವೊತ್ತು, ಸುತ್ತಮುತ್ತಲಿನ ಪರಿವೆಯೇ ನನ್ನಿಂದ ತಪ್ಪಿ ಹೋಗಿತ್ತು. ಡಿಸ್ಪೈನುಶಾಲೆಯಿಂದ ನನ್ನ ಮನೆಯತ್ತ ಸಾಗುವ ಹೊರಳುದಾರಿಯಲ್ಲಿ ಸಿಗುವ ಒಂದೆರಡು ಫರ್ಲಾಂಗಿನುದ್ದದ ನಿರ್ಜನವಾದ ಎಡೆಯನ್ನು, ಎಂದಿನಂತೆ ದಾಟುತ್ತಿದ್ದೆನಷ್ಟೆ–ಹಿಂದಿನಿಂದ ಬುಲೆಟ್ಟಿನಂತೆ ಬಲುಸ್ಪೀಡಾಗಿ ಬಂದ ಮೋಟರುಬೈಕೊಂದು ನನ್ನನ್ನು, ಅಂದರೆ ನನ್ನ ಕಾರನ್ನು ಬಲಗಡೆಯಿಂದ ಇನ್ನೇನು ಸವರಿಯೇ ಬಿಟ್ಟಿತೆನ್ನುವ ಕೂದಲೆಳೆಯ ಅಂತರದಲ್ಲಿ ಬಳಸಿ, ಕೊಂಚ ಮುಂದೆ ಸಾಗಿ ಧಡಕ್ಕನೆ ಎದುರಾಗಿ ನಿಂತಿತು. ಅದು ಸಾಗಿದ ರಭಸವೆಷ್ಟಿತ್ತೆಂದರೆ ನನ್ನನ್ನು ಒಮ್ಮೆಗೇ ರಾಚಿ ಮುಂಜರುಗಿತೆಂಬ ಶಂಕೆಯೆಬ್ಬಿಸಿತು. ಹೀಗೆ ನನ್ನನ್ನು ಕ್ರಮಿಸಿ ಸರಿಯುವ ಕೆಲಗಳಿಗೆಯಲ್ಲಿಯೇ 'ಪರಿಧಿ ಸರ್... ಪರಿಧಿ ಸರ್...' ಎಂದು ಎರಡು ಮೂರು ಸರ್ತಿ ಕರೆದಿದ್ದೂ ಕೇಳಿಬಂತು. ನನಗೇ ಅರಿವಿಲ್ಲದೆ ನನ್ನ ಕಾಲು ಬ್ರೇಕು ಜಡಿದು ಕಾರು ಸರಕ್ಕನೆ ಕೆಲದೂರ ಸರಿದು ಸ್ತಬ್ಧಗೊಂಡಿತು. ಗುಂಡಿಗೆಯಾದರೂ ಕರುಳಿಗಿಳಿದು ಕುಸಿದಂತನ್ನಿಸಿತು.

ಏನಾಯಿತೆಂಬ ಅರಿವು ತೆರೆಯಲಿಕ್ಕೆ ಗಳಿಗೆಗಳೇ ಬೇಕಾದವು. ನಾನು ಕಾರೊಳಗೇ ಜಡಿದುಕೊಂಡುಳಿದೆ. ದರೋಡೆಕೋರರಲ್ಲವಷ್ಟೆ... ಎಂಬ ಸಂದೇಹ–ಸಂದಿಗ್ಧವೆದ್ದು ಕುಳಿತಲ್ಲಿನಿಂದಲೇ ಹಿಂದೆಮುಂದೆ ಗಮನಿಸಿದೆ. ಹಿಂದಿನದನ್ನು ತೋರುವ ಕಾರಿನ ಎಲ್ಲ ಕನ್ನಡಿಗಳಲ್ಲೂ ಇಣಿಕಿಣಿಕಿ ನೋಡಿದೆ. ಸದ್ಯ, ಯಾರೂ ಇರಲಿಲ್ಲ. ಹಾಗಿದ್ದರೆ, ಈ ಬೈಕಿನಾತನಾರು? ನನ್ನನ್ನು ಬೆನ್ನಟ್ಟಿ ಬಂದನೇಕೆ? ನನ್ನನ್ನು ಕೂಗಿ ಕರೆದಿದ್ದು ನಿಜವೇ? ಅಥವಾ, ನನಗೇನಾದರೂ ಭ್ರಾಂತೇ?

ಕುಳಿತಲ್ಲೇ ಉಳಿದು ಧೃತಿ ಶೇಖರಿಸಿದೆ.

ನೋಡನೋಡುತ್ತಲೇ, ಎದುರಿನಾತ ಬೈಕಿನಿಂದಿಳಿದು ನನ್ನತ್ತಲೇ ನಡೆದುಬಂದ. ದಾಪುಗಾಲಿಕ್ಕುತ್ತ ನಡೆದುಬಂದ. ತಲೆಯಲ್ಲಿ ಹೆಲ್ಮೆಟಿತ್ತಾದ್ದರಿಂದ ಯಾರೆಂದು ಗೊತ್ತಾಗಲಿಲ್ಲ. ಆದರೆ, ನಡಿಗೆಯ ಬಗೆ ಮತ್ತು ಮೈಕಟ್ಟನ್ನಾಧರಿಸಿ ತರುಣನೆಂದು ಬಗೆದೆ. ನನ್ನೊಬ್ಬ ಸ್ಟೂಡೆಂಟಿರಬಹುದೇ? ಲಕ್ಷಣವಾಗಿ ಪರಿಧಿ ಸರ್... ಅಂತಂದನಲ್ಲ, ಯಾರಿರಬಹುದು? ನನ್ನನರಸಿ ಬಂದ ಕಾರಣವಾದರೂ ಏನು? ಯೋಚನೆಯಾಯಿತು. ಈ ನಡುವೆ, ಕಾರಿನಿಂದಿಳಿದು ನೋಡಬೇಕೆನ್ನುವ ಒಳವುಮೇದನ್ನು ಎಚ್ಚರದ ಹಕ್ಕೊತ್ತಾಯವಿಕ್ಕಿ ತಡೆದೆ. ಹೃದಯಕ್ಕೆ ಬುದ್ಧಿಯಿತ್ತು ಸಂತುಲಿಸಿದೆ. ಹಾಗೇ ಕುಳಿತಲ್ಲಿಯೇ ಜಡಿದುಕೊಂಡುಳಿದೆ.